ಆ ಬಳಪ ಬೇಕಂತೆ. ಅದನ್ನ ಇಲ್ಲಿಯೇ ಅವಳ ಸಮಾಧಿಯ ಮೇಲೆ ಇಟ್ಟುಹೋಗು" ಎಂದಳು. ನಾನೀಗ ನಿಜಕ್ಕೂ ಉಭಯಸಂಕಟಕ್ಕೆ ಸಿಕ್ಕಿದ್ದೆ. ಸುಮ್ಮನೆ ದೇವಿಯ ಮುಖವನ್ನೇ ನೋಡತೊಡಗಿದೆ. ಇದ್ದಕ್ಕಿದ್ದಂತೆ ಅವಳ ಕಣ್ಣುಗಳು ಕೆಂಡದುಂಡೆಗಳಂತೆ ಹೊಳೆಯತೊಡಗಿದವು. ಅವಳ ಮುಖವರ್ಣ ಒಮ್ಮೇಲೇ ಬದಲಾವಣೆಗೊಂಡಿತ್ತು. ಅವಳು ಏನನ್ನೂ ಮಾತನಾಡದೇ ನೆಲದೆಡೆಗೆ ಕೈತೋರಿಸಿ ಹೂಂ... ಎಂದು ಬಳಪವನ್ನು ಅಲ್ಲಿಡುವಂತೆ ಆದೇಶಿಸಿದಳು. ಏನೇ ಆದರೂ ನಾನು ನನ್ನ ಬಳಪವನ್ನು ಕಳಕೊಳ್ಳಲು ತಯಾರಿರಲಿಲ್ಲ. ಏನು ಮಾಡಲೂ ತೋಚದೇ ಬಂದ ದಾರಿಯಲ್ಲಿಯೇ ಓಡುತ್ತಾ ಬಂದು ಮನೆಸೇರಿದೆ. ದಾರಿಯಲ್ಲಿ ಏನೋ ಅಟ್ಟಿಸಿಕೊಂಡು ಬಂತು ಎಂದು ಅಮ್ಮನಲ್ಲಿ ನೆವ ಹೇಳಿದೆ. ಒಂದು ವಾರಗಳ ಕಾಲ ಜ್ವರದಿಂದ ಬಳಲಿದ ನನ್ನ ಜ್ವರವನ್ನು ಇಳಿಸಲು ಅಪ್ಪ ಮಂತ್ರವಾದಿಗಳನ್ನು ಕರೆಸಿ ತಾಯತ ಕಟ್ಟಿಸಿದ್ದರು.

ಈ ಘಟನೆಯ ನಂತರ ನನ್ನನ್ನು ಅಪ್ಪನೇ ಶಾಲೆಗೆ ಬಿಟ್ಟು ಬರತೊಡಗಿದರು. ದೇವಿ ಶಾಲೆಯಲ್ಲಿ ಸಿಕ್ಕಿದರೂ ಅವಳ ಮುಖ ನೋಡಲು ನನಗೆ ಭಯವಾಗುತ್ತಿತ್ತು. ಅದಾಗಿ ವರ್ಷದಲ್ಲಿಯೇ ಅವಳ ಅಮ್ಮ ಇನ್ನೊಬ್ಬ ತಂಗಿಯನ್ನು ಹುಟ್ಟಿಸಿ ಮಾಯವಾಗಿದ್ದಳು. ದೇವಿಯ ಅಪ್ಪ ಈ ಪಂಚಕನ್ಯೆಯರನ್ನು ಸಾಕಲು ಮತ್ತೊಬ್ಬ ಅಮ್ಮನನ್ನು ಮನೆಗೆ ಕರೆತಂದಿದ್ದ. ಅದೊಂದು ದಿನ ದೇವಿ ನನ್ನ ಕೈಹಿಡಿದು ಅವಳಾಗಿಯೇ ಪ್ರೀತಿಯಿಂದ ಮಾತಾಡಿದ್ದಳು. ತಾನು ಇನ್ನು ಚಿಕ್ಕಮ್ಮನ ತವರಿನಲ್ಲಿದ್ದು ಶಾಲೆಗೆ ಹೋಗುವುದಾಗಿ ಹೇಳಿದ್ದಳು.

ಅದಾಗಿ ಮೂರು ತಿಂಗಳಿಗೆಲ್ಲಾ ಮತ್ತೆ ನಮ್ಮ ಶಾಲೆಯಲ್ಲಿ ಪ್ರತ್ಯಕ್ಷವಾಗಿದ್ದಳು. ನಾನು ಕಾರಣ ಕೇಳಿದಾಗ ನನ್ನನ್ನು ಒಂದು ಗಿಡದಮರೆಗೆ ಕರೆದುಕೊಂಡು ಹೋಗಿ ತನ್ನ ಲಂಗವನ್ನು ಎತ್ತಿ ತೊಡೆಯ ಮೇಲಾದ ನೀಲಿ ಗುರುತುಗಳನ್ನು ತೋರಿಸಿದ್ದಳು. "ಅಲ್ಲೆಲ್ಲ ಒಳ್ಳೆಯೋರು ಕಾಣು. ಆದ್ರೆ ನಮ್ಮ ಚಿಕ್ಕ ತಮ್ಮ ಅವನ್ನಲೆ. ಅವ ಬರೀ ಕೊಳ್ಕ. ರಾತ್ರಿ ಆದರೆ ಸಾಕು, ಬರೂದು. ನನ್ನ ಮೈಮೇಲೆಲ್ಲ ಮಲಗೂದು. ಮೈಯೆಲ್ಲ ಕಚ್ತಾ ಮಾರಾಯ್ತಿ. ಯಾರಿಗಾದ್ರೂ ಹೇಳಿದ್ರೆ ಹೊಡಿತೆ ಅಂತಾ. ನಾನು ಮೊದಮೊದಲು ಸುಮ್ನಿದ್ದೆ. ಎಷ್ಟಂತ ಸುಮ್ನಿರೂದು. ಮೊನ್ನೆಯೊಂದು ದಿನ ಅಂವ ಹತ್ರ ಬಂದ ಕೂಡ್ಲೆ ಸರೀ ಮುಖಕ್ಕೆ ಕಚ್ಚಿಬಿಟ್ಟೆ ಕಾಣು. ಸುಟ್ಟು ಮುಸುಡಿ ಮಾಡ್ಕಂಡು ಓಡಿಹೋದ. ಮಾರನೇ ದಿನವೆಲ್ಲ ಮುಖಮುಚ್ಕಂಡು ತಿರಗ್ತಿದ್ದ. ಅಪ್ಪ ಬಂದೀರಲೆ ಅಲ್ಲಿಗೆ. ಅವ್ರ ಕೂಡೆ ಹಟ ಮಾಡಿ ಮನೀಗೆ ಬಂದ್ಬಿಟ್ಟೆ. ಈಗ ನೋಡಿದ್ರೆ ಚಿಕ್ಕ ಕಾಟ" ಎಂದೆಲ್ಲ ಹೇಳುತ್ತಾ ಕಣ್ಣೀರಾಗಿದ್ದಳು. ನಾನು ಇದನ್ನೆಲ್ಲ ಅಮ್ಮನ ಹತ್ತಿರ ಹೇಳಿದಾಗ ಅಮ್ಮ "ಹೆಣ್ಣಿನ ಬಾಳು ಎಷ್ಟು ಕಷ್ಟ ನೋಡು" ಎಂದು ನಿಡುಸುಯ್ದಿದ್ದಳು.

ಮುಂದೆ ಅವಳ ಚಿಕ್ಕಮ್ಮನಿಗೆ ಮಗು ಹುಟ್ಟಿದ ಮೇಲೆ ದೇವಿ ಮೈಲಿಗೆ ಕಳೆದರೂ ಶಾಲೆಗೆ ಬಂದಿರಲಿಲ್ಲ. ನಾನೂ ಪೇಟೆಯ ಶಾಲೆಗೆ ಸೇರಿ ಊರಿಗೆಹೋಗುವುದು ಅಪರೂಪವಾಯಿತು. ಹತ್ತಾರು ವರ್ಷಗಳ ನಂತರ ಊರ ಜಾತ್ರೆಯಲ್ಲೊಮ್ಮೆ ಸಿಕ್ಕಿ ಬಾಯ್ತುಂಬ ಮಾತಾಡಿದ್ದಳು. ತಾನೀಗ ದೂರದ ನಗರದಲ್ಲಿ ಮೀನಿನ ಫ್ಯಾಕ್ಟರಿಯೊಂದರಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿದ್ದಳು. "ಈಗಲೇ ಕೈತುಂಬ ಸಂಪಾದಿಸ್ತೀಯಾ ಹಾಗಾದ್ರೆ" ಎಂದು ತಮಾಷೆ ಮಾಡಿದಾಗ ಇಡೀ ದಿನ ನೀರಿನಲ್ಲಿ ಕೆಲಸಮಾಡಿ ಚರ್ಮಸುಲಿದು ಹೋದ ತನ್ನ ಕೈಗಳನ್ನು ತೋರಿಸಿ, "ಕಷ್ಟಾಯ್ತದೆಯೆ. ಎಂಥ ಮಾಡೂದು ಹೇಳು. ತಂಗಿಯರಿಗೆ ಬಟ್ಟೆ ಬರೆಗಾದರೂ ಅತದ್ಯಲ್ಲೆ" ಎಂದು ದೊಡ್ಡವಳಂತೆ ಮಾತನಾಡಿದ್ದಳು. ಹೀಗೆ ಬದುಕ ಬಂಡಿಯಲ್ಲಿ ಬೇಯುತ್ತಿರುವ ಅವಳಿಗೆ ಅಲ್ಲೆಲ್ಲೋ ಪ್ರೀತಿಯ ಪಸೆ ಸಿಕ್ಕಿರಬಹುದು. ಅದನ್ನೇ ನಂಬಿ ಯಾರಿಗೂ ಹೇಳದೇ ಕೇಳದೇ ಓಡಿಹೋಗಿರಬಹುದು. ಅಷ್ಟಕ್ಕೂ ಅವಳನ್ನು ಕೇಳುವವರು ಇದ್ದರಾದರೂ ಎಲ್ಲಿ? ಅವಳ ದುಡಿಮೆಯ ಹಣಕ್ಕೆ ಮಾತ್ರವೇ ಅಲ್ಲಿ ಬೆಲೆಯಿದ್ದುದು.